**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ ಮುಳಬಾಗಿಲು**

**ಅಪರಾಧಿಕ ಪ್ರಕರಣ ಸಂಖ್ಯೆ.93/2023**

ಫಿರ್ಯಾದುದಾರರು : **ಇಮ್ರಾನ್ ಖಾನ್**, 37 ವರ್ಷ,
ಬಿನ್ಃ ಮಹಬೂಬ್ ಖಾನ್,
ವಾಸಃ ರಹಮತ್ ನಗರ,
ಮುಳಬಾಗಿಲು ನಗರ/ತಾಲೂಕು.

**-ವಿರುದ್ಧ-**

ಆರೋಪಿ : **ಕಾರ್ತಿಕ್ ಎಸ್**,
ಬಿನ್ಃ ಶ್ರೀನಿವಾಸ್ ಎಂ.,
ವಾಸಃ ಬ್ಯಾಡಬೆಲೆ ಗ್ರಾಮ,
ಬಂಗಾರಪೇಟೆ ತಾಲೂಕು.

- - -

**ದಂಡ ಪ್ರಕ್ರಿಯೆ ಸಂಹಿತೆ ಕಲಂ- 313 ರ ರೀತ್ಯಾ ಆರೋಪಿಯ ಹೇಳಿಕೆ**

**ಪ್ರಶ್ನೆ.1:** ನೀವು ಸಾಕ್ಷಿ ವಿಚಾರಣೆ ಕೇಳಿದ್ದಿರಾ?

ಉತ್ತರಃ

**ಪ್ರಶ್ನೆ.2:** **ಪ್ರಾಸಾ-1 ಇಮ್ರಾನ್ ಖಾನ್.**, ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಅವರಿಂದ ಪಡೆದುಕೊಂಡ ಹಣವನ್ನು ಮರು-ಪಾವತಿ ಮಾಡುವ ಸಲುವಾಗಿ ರೂ.**5,00,000**/-ಗಳಿಗೆ ದಿಃ**25.11.2021** ರಂತೆ ಮುಂದಿನ ದಿನಾಂಕ ನಮೂದಿಸಿದ ಬಂಗಾರಪೇಟೆ ಶಾಖೆಯ ಕರ್ನಾಟಕ ಬ್ಯಾಂಕ್ ಲಿ.,ಬ್ಯಾಂಕಿನ ಚೆಕ್ ನಂ.**247432** ನ್ನು ಅವರ ಹೆಸರಿಗೆ ನೀಡಿರುತ್ತೀರಿ ಅಂತ ಹೇಳುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರಃ

**ಪ್ರಶ್ನೆ.3:** ಪ್ರಾಸಾ-1 ರವರು ಪುನಃ ತಮ್ಮ ಸಾಕ್ಷ್ಯದಲ್ಲಿ, ಸದರಿ ಚೆಕ್ ಅನ್ನು ನಗಧೀಕರಣಗೊಳಿಸಲು ಫಿರ್ಯಾದಿಯು ಮುಳಬಾಗಿಲು ಶಾಖೆಯ ಕೆನರಾ ಬ್ಯಾಂಕ್ ಇಲ್ಲಿಗೆ ಹಾಜರುಪಡಿಸಿದಾಗ, ಸದರಿ ಚೆಕ್ಕು '**ಸಾಕಷ್ಟು ಹಣವಿಲ್ಲ**' ಎಂಬ ಕಾರಣಕ್ಕಾಗಿ ಅನಾಧರಣಗೊಂಡಿರುತ್ತದೆ ಅಂತ ಹೇಳುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರಃ

**ಪ್ರಶ್ನೆ.4:** ಪ್ರಾಸಾ-1 ರವರು ಪುನಃ ತಮ್ಮ ಸಾಕ್ಷ್ಯದಲ್ಲಿ, ಚೆಕ್ ಅನಾಧರಣಗೊಂಡ ಬಗ್ಗೆ ಫಿರ್ಯಾದಿಯು ವಕೀಲರ ಮೂಲಕ ಆರೋಪಿಯಾದ ನಿಮಗೆ ದಿಃ**21.12.2021** ರಂದು ನೋಟೀಸ್ ನೀಡಿದಾಗ್ಯೂ ಸಹ, ಆರೋಪಿಯಾದ ನೀವು ಚೆಕ್ ಬಾಬ್ತು ಹಣವನ್ನು ಅವರಿಗೆ ಕೊಟ್ಟಿರುವುದಿಲ್ಲ ಎಂದೂ, ಆ ಕಾರಣದಿಂದ ನಿಮ್ಮ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡಿರುತ್ತಾರೆ ಅಂತ ಹೇಳುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರಃ

**<u>ಪ್ರಶ್ನೆ.5</u>:** ಪ್ರಾಸಾ-1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಇದುವರೆವಿಗೂ ಸಹ ಚೆಕ್ ಬಾಬ್ತು ಹಣವನ್ನು ಮರು-ಪಾವತಿಸಿರುವುದಿಲ್ಲ ಹಾಗೂ ಆರೋಪಿಯಾದ ನೀವು ಅವರಿಗೆ ಮೋಸ ಮಾಡುವ ಉದ್ದೇಶದಿಂದಲೇ ಈ ರೀತಿಯ ಚೆಕ್ ಅನ್ನು ಅವರಿಗೆ ಕೊಟ್ಟಿರುತ್ತೀರಿ, ಆದುದರಿಂದ **ವರ್ಗಾವಣೀಯ ಲಿಖಿತ ಅಧಿನಿಯಮ ಕಲಂ- 138** ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಮಾಡಿರುತ್ತಾರೆ ಅಂತ ಹೇಳುತ್ತಾರೆ. ಈ ಬಗ್ಗೆ ತಾವು ಏನು ಹೇಳುವಿರಿ?

ಉತ್ತರಃ

**<u>ಪ್ರಶ್ನೆ.6</u>:** ಈ ಕೇಸಿನಲ್ಲಿ ನೀವು ಹೆಚ್ಚಿಗೆ ಏನಾದರೂ ಹೇಳುವುದು ಇದೆಯೇ?

ಉತ್ತರಃ

**<u>ಪ್ರಶ್ನೆ.7</u>:** ನಿಮ್ಮ ಪರ ಸಾಕ್ಷಿ ವಿಚಾರಣೆ ಇದೆಯೇ?

ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಕೇಳಿ, ಆತ ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕಃ **14.07.2026.**

(**ಹರೀಶ್ ಜಿ.**)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಮುಳಬಾಗಿಲು.